

ಚಿತ್ರಪಟ ಕಥನ

# ಹಾರಾಡುವ ಹಾಡುಗಳಿಗೆ ಭಿಗ್ವಾನ್ ಅಂದ್ರೆ ಇಷ್ಟ!

**ಹೆಬ್ಬಾತು, ರಾಜಹಂಸ, ಹದ್ದು–ಗೂಬೆಗಳಿಂದ ಬಣ್ಣಗಟ್ಟುವ ಮಹಾರಾಷ್ಟ್ರದ ಭಿಗ್ವಾನ್ ದೇಶದ ಪ್ರಸಿದ್ಧ ಪಕ್ಷಿಧಾಮಗಳಲ್ಲೊಂದು.**

ಇಂಗ್ಲಿಷ್ ಮೂಲ: **ಪವನ ಕುಮಾರ್ ಎಚ್.**
ಕನ್ನಡಕ್ಕೆ: **ರವಿ ಎಸ್. ಬಳೂಟಗಿ**

ರಾಜಹಂಸಗಳ ಅಪೂರ್ವ ನೋಟ


ಚಳಿಗಾಲದ ತೀವ್ರತೆ ಹೆಚ್ಚಳವಾಗುತ್ತಿದ್ದಂತೆಯೇ ಮಹಾರಾಷ್ಟ್ರದ ಪುಣೆಯ ಸಮೀಪವಿರುವ ಭಿಗ್ವಾನ್ ಪಕ್ಷಿಧಾಮವು ಅಪರೂಪದ 'ಅತಿಥಿ'ಗಳಿಂದ ತುಂಬಿರುತ್ತದೆ. ಕುತ್ತಿಗೆಯ ಕೆಳಗೆ ನೇತಾಡುವ ಬೈನಾಕ್ಯುಲರ್‌ಗಳು ಮತ್ತು ದೊಡ್ಡ ಟೆಲಿಸ್ಕೋಪಿಕ್ ಲೆನ್ಸ್‌ಗಳನ್ನು ಹೊಂದಿರುವ ಕ್ಯಾಮೆರಾಗಳೊಂದಿಗೆ ಸುಳಿದಾಡುವ ವನ್ಯಜೀವಿ ಛಾಯಾಗ್ರಾಹಕರ ಕಲರವವೂ ಹೆಚ್ಚುತ್ತದೆ. ದೇಶದ ನಾನಾ ಭಾಗಗಳಿಂದ ಪಕ್ಷಿವೀಕ್ಷಕರು, ಪುಣೆಯಿಂದ ಸುಮಾರು 100 ಕಿ.ಮೀ. ದೂರದ ಭಿಗ್ವಾನ್ ಪಕ್ಷಿಧಾಮಕ್ಕೆ ಬಂದಿಳಿಯುತ್ತಾರೆ. ವಲಸೆ ಹಕ್ಕಿಗಳನ್ನು ಕಣ್ತುಂಬಿಕೊಳ್ಳುವ ತವಕ ಎಲ್ಲರದು.

ರಾಜಹಂಸ (ಗ್ರೇಟ್ ಫ್ಲೆಮಿಂಗೊ) ಭಿಗ್ವಾನ್‌ನಲ್ಲಿನ ವಿಶೇಷ ಅತಿಥಿ. 230ಕ್ಕೂ ಹೆಚ್ಚು ಪ್ರಭೇದದ ಪಕ್ಷಿಗಳನ್ನು ಅಲ್ಲಿ ಕಾಣಬಹುದು. ಬಾನಾಡಿಗಳ ವಯ್ಯಾರವನ್ನು ಕ್ಯಾಮೆರಾ ಕಣ್ಣುಗಳಲ್ಲಿ ಸೆರೆಹಿಡಿಯಬೇಕು ಎನ್ನುವ ತವಕ ಅಲ್ಲಿಗೆ ಬರುವ ಪ್ರತಿಯೊಬ್ಬ ವನ್ಯಜೀವಿ ಛಾಯಾಗ್ರಾಹಕನದು.

ಉಜನಿ ಜಲಾಶಯದ ಹಿನ್ನೀರಿನ ಮೋಹಕ ನೋಟವದು. ಹಕ್ಕಿಗಳನ್ನು ನೋಡುವ ಉತ್ಸಾಹವು ನಮ್ಮ ಪ್ರಯಾಣದ ಆಯಾಸವನ್ನೆಲ್ಲ ಕರಗಿಸಿತು. ನಮಗೆ ಮೂರು ದಿನಗಳ ಮಾರ್ಗದರ್ಶನ ಮಾಡಲು ಉಮೇಶ ಸಾಳ್ಕೆ ತಮ್ಮ ಮೋಟಾರು ದೋಣಿಯೊಂದಿಗೆ ಸಿದ್ಧರಾಗಿದ್ದರು. 'ಬೇಗ ಬನ್ನಿ. ಟಂಡ್ರಾ ಬೀನ್ ಗೂಸ್' ಆಹಾರ ಅರಸಿ ಹೊರಗೆ ಹೋಗಿದೆ' ಎಂದು ಉತ್ಸಾಹದ ಧ್ವನಿಯಲ್ಲಿ ಕೂಗಿ ಹೇಳಿದರು.

ಟಂಡ್ರಾ ಪ್ರದೇಶದ ಶೀತಲ ತಾಪಮಾನದಿಂದ ಪಾರಾಗಲು ಹೆಬ್ಬಾತು ಹಿಮಾಲಯವನ್ನು ದಾಟಿ ವಲಸೆ ಬರುತ್ತದೆ. ತನ್ನ ಚಳಿಗಾಲದ ನೆಲೆಯಾಗಿ ಭಿಗ್ವಾನ್ ಪ್ರದೇಶವನ್ನು ಆಯ್ಕೆಮಾಡಿಕೊಳ್ಳುತ್ತದೆ. ಪಟ್ಟೆ–ತಲೆ ಹೆಬ್ಬಾತುಗಳೂ (Barheaded goose) ವಲಸೆ ಹಕ್ಕಿಗಳ ಬಳಗದಲ್ಲಿದ್ದವು. ವಿಶಾಲವಾಗಿ ಹರಡಿಕೊಂಡಿರುವ ಹಿನ್ನೀರಿನಲ್ಲಿ ಬಹು ಸಮಯದ ಹುಡುಕಾಟದ ನಂತರ ನಮ್ಮ ತಂಡದವರು 'ಅಪರೂಪದ ಅತಿಥಿ'ಯನ್ನು ಗುರುತಿಸಿದೆವು. ಕೂಡಲೇ ಕ್ಯಾಮೆರಾಗಳು ಕ್ಲಿಕ್ ಕ್ಲಿಕ್ ಎಂದು ಪೈಪೋಟಿ ನಡೆಸಿದವು.

ಬ್ರಿಟಿಷ್ ವಸಾಹತುಶಾಹಿ ನಿರ್ಮಿಸಿದ ಸೇತುವೆಯು ಭೀಮಾ ನದಿಯ ಹಿನ್ನೀರನ್ನು ಎರಡು ಹೋಳಾಗಿಸಿದೆ. ದಿಕ್ಸಾಲ್–ಪರೆವಾಡಿ ಕಡೆ ನೀರಿನ ಆಳವು ಹೆಚ್ಚಾಗಿದ್ದರೆ, ದಲಾಜ್–ಕುಮ್ಬಾರ್ಗಾಂವ್‌ನ ವ್ಯಾಪ್ತಿಯಲ್ಲಿ ನೀರಿನ ಆಳ ಅಷ್ಟಾಗಿಲ್ಲ. ಇಲ್ಲಿ ನಡುಗಡ್ಡೆಗಳು ಸೃಷ್ಟಿಯಾಗಿವೆ. ಈ ನಡುಗಡ್ಡೆಯೇ ಪಕ್ಷಿಗಳು ಮತ್ಸ್ಯಬೇಟೆಯಾಡಲು ಪ್ರಶಸ್ತವಾದುದು. ಮೀನುಗಳಿಗೆ ಅಗತ್ಯವಾದ ಪಾಚಿಗಟ್ಟಿದ ಆಹಾರಕ್ಕೂ ಅದು ಸೂಕ್ತವಾದ ಸ್ಥಳವಾಗಿದೆ. ಇಲ್ಲಿನ ಅಪಾರ ಮತ್ಸ್ಯಸಂಪತ್ತು, ಹಿತಕರ ಹವಾಗುಣ ಮತ್ತು ಅರಣ್ಯ ಇಲಾಖೆಯೊಂದಿಗೆ ಸ್ಥಳೀಯರು ಕೈಗೊಂಡಿರುವ ಪರಿಸರ ಸಂರಕ್ಷಣೆಯ ಕ್ರಮಗಳು ಭಿಗ್ವಾನ್ ಧಾಮವನ್ನು ವಲಸೆ ಹಕ್ಕಿಗಳ ನೆಚ್ಚಿನ ತಾಣವಾಗಿಸಿದೆ.



ಪಕ್ಷಿಗಳ ಗುಂಪು

ನಮ್ಮ ದೋಣಿಯು ಮಂಜಿನ ನಡುವೆಯೇ ವೇಗವಾಗಿ ಸಾಗುತ್ತಲೇ ಇತ್ತು. ನೂರಾರು 'ಸೀಗಲ್'ಗಳು ಮತ್ತು 'ರಿವರ್ ಟರ್ನ್'ಗಳು ಎದುರಾದವು. ನಮ್ಮನ್ನೇ ಅವು ಬೆನ್ನಟ್ಟಿದವು. ಪಕ್ಷಿವೀಕ್ಷಕರು ಚುರುಮುರಿ ಮತ್ತು ಮೀನುಮರಿಗಳನ್ನು ನೀಡಿ ಅವುಗಳ ಸ್ನೇಹ ಗಳಿಸಿಕೊಂಡರು. ಹಿಂಡಿನಲ್ಲಿದ್ದ ಕೆಲವು ಪಕ್ಷಿಗಳು